



ಅರುಣ ಪಿ. ಭಟ್ಟ

## ವಾರಭವಿಷ್ಯ: 05.05.2022ರಿಂದ 11.05.2022ರವರೆಗೆ




ವೆಚ್ಚ ಏರಿದರೂ ಆದಾಯದಲ್ಲಿನ ಹೆಚ್ಚಳ ಖರ್ಚುಗಳನ್ನು ಸರಿದೂಗಿಸುತ್ತದೆ. ನಿಮ್ಮ ಅಭಿಪ್ರಾಯಗಳನ್ನು ಇತರರ ಮೇಲೆ ಹೇರಬೇಡಿ. ನಿಮ್ಮ ಮನೆಯಲ್ಲಿ ಸಾಮರಸ್ಯ ತರಲು ನಿಕಟ ಸಹಕಾರದೊಂದಿಗೆ ಕೆಲಸ ಮಾಡಬೇಕು. ನಿಮ್ಮ ಸ್ಪರ್ಧಾತ್ಮಕ ಸ್ವಭಾವ ನೀವು ಸದಾ ಮುಂದೆ ಉಳಿಯಲು ಸಹಾಯ ಮಾಡುತ್ತದೆ. ವಿರೋಧಿಗಳಿಂದ ದೂರವಿರಲು ಪ್ರಯತ್ನಿಸಿ. ಶುಭದಿನ 10. ಶ್ರೀ ದುರ್ಗಾ ಆರಾಧನೆ ಮಾಡಿರಿ.




ವಾರದ ಶುರುವಿನಿಂದಲೇ ವೃತ್ತಿಪರ ಜೀವನದಲ್ಲಿ ಉತ್ತಮ ಅವಕಾಶಗಳು ದೊರೆಯಲಿವೆ. ಸರಿಯಾದ ಸಮಯಕ್ಕೆ ಕೆಲಸ ಪೂರ್ಣಗೊಳ್ಳಲಿವೆ. ಮಕ್ಕಳಿಗೆ ಸಹಾಯ ಮಾಡಲಿದ್ದೀರಿ. ಕುಟುಂಬದಲ್ಲಿ ಹಲವು ಬದಲಾವಣೆ ಮೂಲಕ ಸಂತೋಷ ಉಂಟು ಮಾಡಲಿದ್ದೀರಿ. ಉದ್ಯೋಗ ಸ್ಥಳದಲ್ಲಿ ಹೆಚ್ಚು ತಾಳ್ಮೆಯಿಂದ ಕೆಲಸ ಮಾಡಿ. ಇಲ್ಲದಿದ್ದರೆ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಶುಭದಿನ 08. ಹನುಮಾನ್ ಚಾಲೀಸ್ ಓದಿರಿ.




ದಾನ ಧರ್ಮ ಕಾರ್ಯಗಳಲ್ಲಿ ಆಸಕ್ತಿ ಮೂಡುತ್ತದೆ. ಅದಕ್ಕೆ ನಿಮ್ಮ ಕುಟುಂಬದ ಬೆಂಬಲವೂ ದೊರೆಯುತ್ತದೆ. ಆದಾಯ ಮೂಲಗಳಿಂದ ಉತ್ತಮ ವರಮಾನ ಇರುತ್ತದೆ. ಇದರಿಂದ ನಿಮ್ಮ ಆತ್ಮವಿಶ್ವಾಸ ಹೆಚ್ಚಾಗುತ್ತದೆ ಸಂತೋಷ ಕೂಡ ಉಂಟಾಗುತ್ತದೆ. ಬಹಳ ಕಾಲದಿಂದ ನೀವು ಖರೀದಿ ಮಾಡಬೇಕು ಎಂದಿದ್ದ ವಸ್ತುವೊಂದರ ಖರೀದಿ ಮಾಡುತ್ತೀರಿ. ಶುಭದಿನ 09. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ನಿಮ್ಮ ಸಾಮರ್ಥ್ಯವನ್ನು ಸರಿಯಾದ ದಿಕ್ಕಿನಲ್ಲಿ ಬಳಕೆ ಮಾಡಿಕೊಳ್ಳುತ್ತೀರಿ. ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ. ಕುಟುಂಬದ ಸದಸ್ಯರ ಜತೆಗೆ ಉತ್ತಮ ಬಾಂಧವ್ಯ ಇರುತ್ತದೆ. ಸೋದರ ಸೋದರಿ ಜತೆಗೆ ಅತಿ ಮುಖ್ಯವಾದ ವಿಚಾರಗಳನ್ನು ಚರ್ಚೆ ಮಾಡುತ್ತೀರಿ. ಇದರಿಂದ ಅವರ ಪ್ರಗತಿಗೆ ಅನುಕೂಲ ಆಗುತ್ತದೆ. ವಾರದ ಕೊನೆ ಭಾಗದಲ್ಲಿ ಕೆಲಸದಲ್ಲಿ ತೀವ್ರಗೊಳ್ಳುತ್ತದೆ. ಶುಭದಿನ 07. ವಿಷ್ಣು ಸಹಸ್ರನಾಮ ಓದಿರಿ.




ವಾರದ ಮೊದಲ ಭಾಗದಲ್ಲಿ ದೂರದ ಪ್ರದೇಶಗಳಿಗೆ ತೆರಳುವ ಸಂಭವ. ಭೂಮಿಗೆ ಸಂಬಂಧಿಸಿದ ವ್ಯಾಜ್ಯಗಳು ಕೋರ್ಟಿನಲ್ಲಿ ಇದ್ದರೆ ಅವುಗಳನ್ನು ನಿವಾರಿಸಿಕೊಳ್ಳಲು ಶ್ರಮ ಪಡಬೇಕಾಗುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡುವ ಆಲೋಚನೆ ಮಾಡುತ್ತೀರಿ. ನಿಮ್ಮ ಆರೋಗ್ಯದಲ್ಲಿ ಸ್ವಲ್ಪ ಏರುಪೇರು ಆಗಬಹುದು. ಶುಭದಿನ 06 ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಸಂಬಂಧಿಕರ ಭೇಟಿ ಮಾಡುವ ಸಾಧ್ಯತೆ ಇದೆ. ಅವರ ಜತೆ ಚರ್ಚೆ ಮಾಡಲಿದ್ದೀರಿ. ಹೆಚ್ಚಿನ ಖರ್ಚು ಆಗಲಿದೆ. ಉದ್ಯೋಗದಲ್ಲಿ ಒತ್ತಡ ಹೆಚ್ಚಾಗುವ ಸಾಧ್ಯತೆಯಿದೆ. ತಲೆ ನೋವುಕಾಡಬಹುದು. ಭೂಮಿ ಖರೀದಿಗೆ ಮನಸ್ಸು ಮಾಡುತ್ತೀರಿ. ವ್ಯವಹಾರದಲ್ಲಿ ಆತುರ ಮಾಡುವುದರಿಂದ ನಿಮ್ಮ ಶ್ರಮದ ಹಣವು ಇನ್ನೊಬ್ಬರ ಕೈನಲ್ಲಿ ಸಿಲುಕಿಕೊಳ್ಳುತ್ತದೆ. ಶುಭದಿನ 05. ದೇವ್ಯಪರಾಧ ಕ್ಷಮಾಪನಾ ಸ್ತೋತ್ರ 18 ಸಾರೆ ಪಠಣ ಮಾಡಿರಿ.




ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಕಾಣಿಸುತ್ತದೆ. ನಿಮ್ಮ ಆರೋಗ್ಯ ಕೂಡ ಉತ್ತಮವಾಗಿರುತ್ತದೆ. ಮಕ್ಕಳ ಪ್ರಗತಿ ನಿಧಾನ ಆಗುವುದರಿಂದ ಚಿಂತೆಗೆ ಕಾರಣವಾಗುತ್ತದೆ. ತಂತ್ರಜ್ಞಾನ ಹಾಗೂ ಮ್ಯಾನೇಜ್‌ಮೆಂಟ್ ಕ್ಷೇತ್ರಕ್ಕೆ ಸಂಬಂಧಿಸಿದವರಿಗೆ ಉತ್ತಮವಾದ ಪ್ರಗತಿ ಕಾಣಲಿದೆ. ಕೆಲ ನಿರ್ದಿಷ್ಟ ಕೆಲಸಗಳನ್ನು ಪೂರೈಸಲು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ. ಶುಭದಿನ 07. ದಕ್ಷಿಣಾಮೂರ್ತಿ ಸ್ತೋತ್ರ ಪಠಣ ಮಾಡಿರಿ.




ಉದ್ಯೋಗಸ್ಥರು ನಿಮಗೆ ವಹಿಸಿದ ಕೆಲಸಗಳನ್ನು ಪೂರೈಸಲು ಯಶಸ್ವಿ ಆಗುತ್ತೀರಿ. ಸಿಬ್ಬಂದಿಯ ಆತ್ಮಸ್ಥೈರ್ಯ ಹೆಚ್ಚಿಸುವಲ್ಲಿ ಸಫಲರಾಗುತ್ತೀರಿ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ನೀಡಿದ ಸಂದರ್ಶನಗಳು ಯಶಸ್ಸು ಕಾಣುವ ಸಾಧ್ಯತೆಗಳಿವೆ. ವಾರದ ಕೊನೆಯಲ್ಲಿ ದೂರದ ಪ್ರದೇಶಗಳಿಗೆ ಭೇಟಿ ನೀಡಬೇಕಾಗುತ್ತದೆ. ಮುಖ್ಯ ಕೆಲಸಗಳನ್ನು ಪೂರ್ಣಗೊಳಿಸಬೇಕಾಗುತ್ತದೆ. ಶುಭದಿನ 06. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.




ಹಣಕಾಸು ಹೂಡಿಕೆಯಲ್ಲಿ ಪ್ರಗತಿ ಕಾಣಲಿದ್ದೀರಿ. ಬಾಹ್ಯ ಚಟುವಟಿಕೆಗಳು ಈ ಹಿಂದಿನಂತೆಯೇ ನಡೆಯುತ್ತವೆ. ತಲೆನೋವು, ಕಣ್ಣಿಗೆ ಸಂಬಂಧಿಸಿದ ತೊಂದರೆ ಹಾಗೂ ಹಲ್ಲು ನೋವು ಕಾಡಬಹುದು. ಈ ಸಮಸ್ಯೆಗಳಿಗೆ ಆಸ್ಪತ್ರೆಗೆ ಹೋಗುವುದು ಅನಿವಾರ್ಯ. ವಾರದ ಅಂತ್ಯಕ್ಕೆ ಸರಿಯುತ್ತಾ ಗ್ರಹ ಸ್ಥಿತಿಗಳು ನಿಮಗೆ ಅನುಕೂಲಕರವಾಗಿ ಪರಿಣಮಿಸುತ್ತದೆ. ಶುಭದಿನ 08. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.




ವಾರದ ಶುರುವಿನಿಂದಲೇ ನಿಮ್ಮ ಅದೃಷ್ಟ ಚೆನ್ನಾಗಿದೆ. ನಿಮ್ಮ ಕೆಲಸಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಹೆಚ್ಚು ಚಟುವಟಿಕೆಯಿಂದ ಕಾಣಿಸಿಕೊಳ್ಳುತ್ತೀರಿ. ಕಟ್ಟಡ ವಾಹನಗಳ ನಿರ್ವಹಣೆಯು ನಿರಂತರ ಚಿಂತೆಗೆ ಕಾರಣವಾಗುತ್ತದೆ. ಶ್ವಾಸಕೋಶ ಹಾಗೂ ರಕ್ತದ ಸಮಸ್ಯೆಯು ಕಾಣಿಸಿಕೊಳ್ಳಬಹುದು. ವಾರಾಂತ್ಯಕ್ಕೆ ಹಣದ ಹರಿವು ಹೆಚ್ಚಾಗಲಿದೆ. ಶುಭದಿನ 05. ಮಾರುತಿ ಗುಡಿಗೆ ಮುಖ ನೋಡಿದ ಎಣ್ಣೆ ನೀಡಿರಿ.




ನಿಮ್ಮ ಶ್ರಮಕ್ಕೆ ಯಶಸ್ಸು ದೊರೆಯುತ್ತದೆ. ನಿಮ್ಮ ಆರೋಗ್ಯ ಚೆನ್ನಾಗಿರುತ್ತದೆ. ವೈವಾಹಿಕ ಜೀವನವು ಸಂತೋಷವಾಗಿ ಇರುತ್ತದೆ.ಮನಸಿಗೆ ಸಂತೋಷ ನೀಡುವಂಥ ಗೃಹಾಲಂಕಾರ ವಸ್ತುಗಳ ಖರೀದಿಗೆ ಮುಂದಾಗುತ್ತೀರಿ. ಉದ್ಯಮಿಗಳಾಗಿದ್ದಲ್ಲಿ ದೀರ್ಘಾವಧಿ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆಗಳಿವೆ. ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ಬಿಕ್ಕಟ್ಟು ಉದ್ಭವಿಸುತ್ತದೆ. ಶುಭದಿನ 06. ಸುಬ್ರಹ್ಮಣ್ಯ ಜಪ ಮಾಡಿರಿ.




ನಿಮ್ಮ ಕೆಲಸ–ಕಾರ್ಯಗಳನ್ನು ಇನ್ನಷ್ಟು ಒಪ್ಪ ಓರಣವಾಗಿ ಮಾಡಲು ಇನ್ನೂ ಶ್ರಮ ಹಾಕುತ್ತೀರಿ. ಕೆಲವು ವ್ಯವಹಾರಗಳನ್ನು ಮಾಡುವಾಗ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಜತೆಗೆ ಸ್ವಚ್ಛತೆ ಕಡೆಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಅದನ್ನು ನಿರ್ಲಕ್ಷಿಸಿದಲ್ಲಿ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಶುಭದಿನ 10. ನವದುರ್ಗಾ ಆರಾಧನೆ ಮಾಡಿರಿ.